## ಕರ್ನಾಟಕ ವಿಧಾನ ಪರಿಷತ್ತು

15632 ನಿ-72-(74)
4KR
0409

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ ರವರ ಗಮನ ಸೆಳೆಯುವ ಸೂಚನೆ ನಿಯಮ 72ಕ್ಕೆ ಉತ್ತರ.

**ಸೂಚನೆ: -**

ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ರಾಜ್ಯದಲ್ಲಿ ಬುಡಕಟ್ಟು ಜನಾಂಗದ ಅನೇಕರಿಗೆ ಹಕ್ಕು ಪತ್ರ ನೀಡುವ ಪ್ರಕ್ರಿಯೆ ಸಮರ್ಪಕವಾಗಿ ಆಗುತ್ತಿಲ್ಲ.(ಅರಣ್ಯ ಹಕ್ಕು ಸಮಿತಿಯಲ್ಲಿ ಅರ್ಜಿದಾರರು 1 ಎಕರೆ ಸಾಗುವಳಿ ಮಾಡುವ ದಾಖಲೆ ಕೊಟ್ಟವರಿಗೆ ಕೆಲವೆ ಗುಂಟೆಗಳಿಗೆ ಮಾತ್ರ ಹಕ್ಕು ಪತ್ರ ನೀಡಿರುತ್ತಾರೆ) ಮತ್ತು ಉತ್ತರ ಕನ್ನಡ ಜಿಲ್ಲೆಯ ಅನೇಕರಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಗ್ರಾಮ ಅರಣ್ಯ ಹಕ್ಕು ಸಮಿತಿ ಮಟ್ಟದಲ್ಲಿ GPS ಮಾಡಿ ಅಂತಿಮಗೊಳಿಸಿದಷ್ಟು ಭೂಮಿಗೆ ಹಕ್ಕು ಪತ್ರ ನೀಡದೆ ಕಡಿಮೆ ಗುಂಟೆಗಳ ಭೂಮಿಗೆ ಮಾತ್ರ ಹಕ್ಕು ಪತ್ರ ನೀಡಿರುತ್ತಾರೆ. ಇದನ್ನು ಸರಿಪಡಿಸಲು ಇರುವ ಮಾನದಂಡಗಳು ಮತ್ತು ಸರ್ಕಾರದ ಮುಂದಿನ ಕ್ರಮಗಳ ಕುರಿತು & ಸಾರ್ವಜನಿಕ ಮಹತ್ವದ ವಿಷಯದ ಕುರಿತು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:-**

ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ - 2006 (2007ರ2) ಮತ್ತು ನಿಯಮ - 2008 (ನಿಯಮಗಳ ತಿದ್ದುಪಡಿ 2012) ರಡಿ ಅರಣ್ಯ ಹಕ್ಕು ಕೋರಿ ಸ್ವೀಕೃತವಾಗಿರುವ ಅರ್ಜಿಗಳನ್ನು ಅರಣ್ಯ ಕಾಯ್ದೆಯ ನಿಯಮ 4ರಡಿ ಗ್ರಾಮ ಸಭೆಯ, ನಿಯಮ 6 ರಡಿ ಉಪವಿಭಾಗೀಯ ಮಟ್ಟದ ಸಮಿತಿಯ ಹಾಗೂ ನಿಯಮ 8 ರಡಿ ಜಿಲ್ಲಾ ಮಟ್ಟದ ಸಮಿತಿಯ ಪ್ರಕಾರ್ಯಗಳನ್ನು ವಿವರಿಸಲಾಗಿದೆ.

**ಗ್ರಾಮ ಅರಣ್ಯ ಹಕ್ಕು ಸಮಿತಿ:-** ಗ್ರಾಮ ಅರಣ್ಯ ಹಕ್ಕು ಸಮಿತಿಯು ಅರಣ್ಯಹಕ್ಕು ಕಾಯ್ದೆಯ ನಿಯಮ 4ರ ಪ್ರಕಾರ ಗ್ರಾಮ ಅರಣ್ಯ ಹಕ್ಕು ಸಮಿತಿ/ಗ್ರಾಮ ಸಭೆಯು ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲನೆ ಮಾಡಿದ ನಂತರ ಜಂಟಿ ಸರ್ವೆ ನಡೆಸಿ ಅರ್ಹ ಅರ್ಜಿದಾರರ ಅನುಭೋಗದ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ನಕ್ಷೆಯನ್ನು ತಯಾರಿಸಿ ಉಪವಿಭಾಗೀಯ ಮಟ್ಟದ ಸಮಿತಿಗೆ ಸಲ್ಲಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

ಅರಣ್ಯ ಕಾಯ್ದೆ 6(2) ರಲ್ಲಿ ಸೂಚಿಸಿರುವಂತೆ ಗ್ರಾಮ ಅರಣ್ಯ ಹಕ್ಕು ಸಮಿತಿ/ಗ್ರಾಮ ಸಭೆಯ ನಿರ್ಣಯದಿಂದ ಬಾಧಿತನಾದ ವ್ಯಕ್ತಿಯು, ಗ್ರಾಮ ಸಭೆಯ ನಿರ್ಣಯವನ್ನು ಅಂಗೀಕರಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಉಪವಿಭಾಗೀಯ ಮಟ್ಟದ ಅರಣ್ಯ ಹಕ್ಕು ಸಮಿತಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

**ಉಪವಿಭಾಗೀಯ ಮಟ್ಟದ ಸಮಿತಿ**:- ಉಪವಿಭಾಗೀಯ ಮಟ್ಟದ ಸಮಿತಿಯು ಅರಣ್ಯಹಕ್ಕು ಕಾಯ್ದೆಯ ನಿಯಮ 6 ರಡಿ ಗ್ರಾಮ ಸಭೆಯಿಂದ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಸೂಕ್ತ ಶಿಫಾರಿಸಿನೊಂದಿಗೆ ಅಂತಿಮ ತೀರ್ಮಾನಕ್ಕಾಗಿ ಭೂಮಿಯನ್ನು ಮಂಜೂರು ಮಾಡಲು ಜಿಲ್ಲಾಮಟ್ಟದ ಅರಣ್ಯ ಹಕ್ಕು ಸಮಿತಿಗೆ ಸಲ್ಲಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

ಅರಣ್ಯ ಕಾಯ್ದೆ 6(4) ರಲ್ಲಿ ಸೂಚಿಸಿರುವಂತೆ ಉಪವಿಭಾಗೀಯ ಮಟ್ಟದ ಅರಣ್ಯ ಹಕ್ಕು ಸಮಿತಿಯಲ್ಲಿ ನಿರ್ಣಯದಿಂದ ಬಾಧಿತನಾದ ವ್ಯಕ್ತಿಯು, ಉಪವಿಭಾಗೀಯ ಮಟ್ಟದ ಸಮಿತಿಯ ನಿರ್ಣಯವನ್ನು ಅಂಗೀಕರಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಜಿಲ್ಲಾ ಮಟ್ಟದ ಸಮಿತಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

**ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ:-** ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿಯು ಉಪವಿಭಾಗೀಯ ಮಟ್ಟದ ಅರಣ್ಯ ಹಕ್ಕು ಸಮಿತಿಯಿಂದ ಶಿಫಾರಸ್ಸು ಮಾಡಲಾದ ಅರ್ಜಿಗಳನ್ನು ಪರಿಶೀಲಿಸಿ ನಿಯಮ 8 ರಡಿ ಅನುಮೋದಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

--2

ಜೂನ್-2025 ರ ಅಂತ್ಯಕ್ಕೆ ಅರಣ್ಯ ಹಕ್ಕು ಕಾಯ್ದೆಯಡಿ ಸಾಧಿಸಿರುವ ಪ್ರಗತಿಯ ವಿವರಗಳು ಈ ಕೆಳಂಡತಿವೆ.

**1. ವೈಯಕ್ತಿಕ ಹಕ್ಕು ಪತ್ರ**

| ಕ್ಲೇಮುದಾರರ ವಿವರ | ಸ್ವೀಕೃತ ಗೊಂಡ ಅರ್ಜಿಗಳ ಸಂಖ್ಯೆ | ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ | ಮಂಜೂರು ಮಾಡಿರುವ ಭೂಮಿ ವಿವರ (ಎಕರೆಗಳಲ್ಲಿ) | ತಿರಸ್ಕೃತ ಗೊಂಡಿರುವ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|
| ಪರಿಶಿಷ್ಟ ಪಂಗಡ | 48220 | 13058 | 17870.277 | 33588 | 1574 |
| ಇತರೆ ಪಾರಂಪರಿಕ ಅರಣ್ಯ ವಾಸಿಗಳು | 241016 | 2297 | 2425.925 | 224557 | 14162 |
| **ಒಟ್ಟು** | **289236** | **15355** | **20296.202** | **258145** | **15736** |

**2. ಸಮುದಾಯ ಹಕ್ಕು**

| ಕ್ಲೇಮುದಾರರ ವಿವರ | ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ | ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ | ಮಂಜೂರು ಮಾಡಿರುವ ಭೂಮಿ ವಿವರ (ಎಕರೆಗಳಲ್ಲಿ) | ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|
| ಸಮುದಾಯ ಹಕ್ಕುಗಳು | 5940 | 1345 | 43478.93 | 4270 | 325 |

ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನ ಕುರಿತಂತೆ ರಾಜ್ಯ ಮಟ್ಟದ ಸಮಿತಿಯಿಂದ ಜಿಲ್ಲಾ ಸಮಿತಿಗಳಿಗೆ ಸ್ಪಷ್ಟೀಕರಣಗಳನ್ನು ಕಾಲ ಕಾಲಕ್ಕೆ ನೀಡಲಾಗುತ್ತಿದೆ. (ವಿವರಗಳನ್ನು ಅನುಬಂಧ-01 ರಲ್ಲಿ ನೀಡಿದೆ)

ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಪರಿಶಿಷ್ಟ ಪಂಗಡದ ಒಟ್ಟು 4335 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು ಸದರಿ ಅರ್ಜಿಗಳಲ್ಲಿ 1356 ಅರ್ಜಿದಾರರಿಗೆ ಮಾನ್ಯ ಮಾಡಿ ಹಕ್ಕು ಪತ್ರ ನೀಡಲಾಗಿದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಂತೆ ತಿರಸ್ಕೃತಗೊಂಡಿರುವ 2979 ಅರ್ಜಿಗಳ ಪುನರ್ ಪರಿಶೀಲನೆ ಕಾರ್ಯವನ್ನು ಜಿಲ್ಲಾ ಹಂತದಲ್ಲಿ ಅರಣ್ಯ ಹಕ್ಕು ಸಮಿತಿಗಳ ಮೂಲಕ ಕೈಗೊಳ್ಳಲಾಗುತ್ತಿದ್ದು, ಸದರಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಅರಣ್ಯ ಹಕ್ಕು ಕಾಯ್ದೆಯಡಿ ಅರಣ್ಯ ಹಕ್ಕು ಕೋರಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಲು ಗ್ರಾಮ ಅರಣ್ಯ ಹಕ್ಕು ಸಮಿತಿ ವತಿಯಿಂದ ಸ್ಥಳ ಪರಿಶೀಲನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅರ್ಜಿದಾರರು ತೋರಿಸಿದ ಅನುಭೋಗದ ನಿವೇಶನ/ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ನಕ್ಷೆಯನ್ನು ತಯಾರಿಸಿ, ಗ್ರಾಮ ಅರಣ್ಯ ಹಕ್ಕು ಸಮಿತಿಯು ಸಲ್ಲಿಸಿದ ವರದಿ/ದಾಖಲೆಗಳನ್ನು ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿಯಲ್ಲಿ ಪರಿಶೀಲಿಸಿ ಅನುಭೋಗದ ನಿವೇಶನ/ಜಮೀನನ್ನು ಮಂಜೂರು ಮಾಡಲಾಗುತ್ತದೆ.

ರಾಜ್ಯ ಮಟ್ಟದ ಮೇಲ್ವಿಚಾರಣ ಸಮಿತಿಯಿಂದ ಅರಣ್ಯ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ಸಮಿತಿಗಳಿಗೆ, ಉಪವಿಭಾಗೀಯ ಮಟ್ಟದ ಸಮಿತಿಗೆ, ಗ್ರಾಮ ಸಭೆಗಳಿಗೆ ಸ್ಪಷ್ಟೀಕರಣ ಹಾಗೂ ನಿರ್ದೇಶನಗಳನ್ನು ನೀಡಲಾಗುತ್ತಿದೆ.

(ಕಡತ ಸಂಖ್ಯೆ: STW/SECA/TSP/36/2025)

(ಸಿದ್ದರಾಮಯ್ಯ)
ಮುಖ್ಯಮಂತ್ರಿ